# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 273 (2185)
2. ಸದಸ್ಯರ ಹೆಸರು : ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸುವ ದಿನಾಂಕ : 18.03.2022
   (ಕೃಷಿ ಇಲಾಖೆಯಿಂದ ವರ್ಗಾವಣೆಯಾದ ಪ್ರಶ್ನೆ)
4. ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಹಾವೇರಿ ಜಿಲ್ಲೆಗೆ ಸ್ಪೈಸ್ ಪಾರ್ಕ್ ಯಾವ ವರ್ಷದಲ್ಲಿ ಮಂಜೂರು ಮಾಡಲಾಗಿದೆ; ಈ ಸ್ಪೈಸ್ ಪಾರ್ಕ್ ನಿರ್ಮಾಣಕ್ಕೆ ಎಷ್ಟು ಎಕರೆ ಜಮೀನು ಮಂಜೂರಾಗಿದೆ; | ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕು, ಬ್ಯಾಡಗಿ ಗ್ರಾಮದಲ್ಲಿರುವ State Trading Corporation (Chilli processing unit) ಜಮೀನಿನ ಪಕ್ಕದಲ್ಲಿ ಒಟ್ಟು 115-34 ಎಕರೆ ಜಮೀನನ್ನು ಸ್ಪೈಸ್ ಪಾರ್ಕ್ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಲು ದಿನಾಂಕ: 23.09.2008 ಮತ್ತು 03.11.2009ರಂದು ಪ್ರಾಥಮಿಕ ಅಧಿಸೂಚನೆಗಳನ್ನು ಹಾಗೂ ದಿನಾಂಕ: 07.11.2009 ಮತ್ತು 05.08.2010ರಂದು ಅಂತಿಮ ಅಧಿಸೂಚನೆಗಳನ್ನು ಹೊರಡಿಸಿದ್ದು, ಪ್ರತಿ ಎಕರೆ ಜಮೀನಿಗೆ ರೂ.12.00 ಲಕ್ಷಗಳಂತೆ ಪರಿಹಾರ ದರ ನಿಗದಿಪಡಿಸಲಾಗಿದೆ.<br><br>ಈ ಪ್ರದೇಶದಲ್ಲಿ ಸ್ಪೈಸ್ ಪಾರ್ಕ್ ನಿರ್ಮಾಣ ಮಾಡುವ ಸಂಬಂಧ ಮೆ॥ ಫುಡ್ ಪಾರ್ಕ್ ಲಿ.ರವರು ಕರೆದಿದ್ದ ಟೆಂಡರಿನಲ್ಲಿ ಭಾಗವಹಿಸಲು ಯಾರೂ ಮುಂದೆ ಬಾರದ ಮತ್ತು ತೋಟಗಾರಿಕಾ ಇಲಾಖೆಯವರು ಸ್ಪೈಸ್ ಪಾರ್ಕ್ ನಿರ್ಮಾಣದ ಬಗ್ಗೆ ಆಸಕ್ತಿ ತೋರದ ಕಾರಣ ಹಾಗೂ ಸದರಿ ಭೂಸ್ವಾಧೀನಕ್ಕೆ ರೈತರು ತೀವ್ರ ಪ್ರತಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ದಿನಾಂಕ: 18.06.2016 ರಂದು ನಡೆದ ಮಂಡಳಿ ಸಭೆಯಲ್ಲಿ |
| (ಆ) | ಸ್ಪೈಸ್ ಪಾರ್ಕಿಗೆ ಮಂಜೂರಾಗಿರುವ ಜಮೀನಿನಲ್ಲಿ ತೆಗೆದುಕೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಯಾವುವು; | |
| (ಇ) | ಸ್ಪೈಸ್ ಪಾರ್ಕ್ ಪ್ರಾರಂಭಿಸಲು ವಿಳಂಬವಾಗಿರುವುದಕ್ಕೆ ಕಾರಣಗಳು ಏನು; ಮತ್ತು ಯಾವಾಗ ಪ್ರಾರಂಭಿಸಲಾಗುವುದು? | |

| | | |
|---|---|---|
| | | ವಿಷಯವನ್ನು ಚರ್ಚಿಸಿ, ಈ ಕುರಿತು ತೋಟಗಾರಿಕೆ ಇಲಾಖೆ, ಫುಡ್ ಕರ್ನಾಟಕ ಲಿ., ಮತ್ತು ಭಾರತ ಸರ್ಕಾರದ ಸಾಂಬಾರು ಮಂಡಳಿ ಇವರುಗಳೊಂದಿಗೆ ಚರ್ಚಿಸಲು ನಿರ್ಣಯಿಸಲಾಗಿದೆ.<br><br>ಮೇಲ್ಕಂಡ ಜಮೀನನ್ನು ಭೂಸ್ವಾಧೀನ ಕ್ರಮದಿಂದ ಕೈಬಿಡುವ ಅಥವಾ ಭೂಸ್ವಾಧೀನ ಪ್ರಕ್ರಿಯೆಯನ್ನು ಮುಂದುವರೆಸುವ ಕುರಿತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ: 08.08.2017ರಂದು ಸಭೆಯಲ್ಲಿ ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ ಮತ್ತು ಸಾಂಬಾರು ಮಂಡಳಿಯ ಅಧಿಕಾರಿಗಳೊಂದಿಗೆ ವಿಷಯವನ್ನು ವಿವರವಾಗಿ ಚರ್ಚಿಸಿದ ನಂತರ, ಕೇಂದ್ರ ಸರ್ಕಾರವು ಸ್ಪೈಸ್ ಪಾರ್ಕ್ ನಿರ್ಮಾಣಕ್ಕಾಗಿ ಬ್ಯಾಡಗಿ ಗ್ರಾಮವನ್ನು ಗುರುತಿಸಿಲ್ಲವಾದ್ದರಿಂದ ಹಾಗೂ ಸದರಿ ಜಮೀನು ಅವಶ್ಯಕತೆ ಇಲ್ಲವೆಂದು ತೋಟಗಾರಿಕಾ ಇಲಾಖೆಯು ತಿಳಿಸಿರುವ ಕಾರಣ ಈ ಬಗ್ಗೆ ತೋಟಗಾರಿಕೆ ಇಲಾಖೆಯಿಂದ ವರದಿ ಪಡೆದ ನಂತರ ಭೂಸ್ವಾಧೀನ ಪ್ರಕ್ರಿಯೆ ಕುರಿತು ಸಮಗ್ರವಾದ ವರದಿಯನ್ನು ಮಂಡಳಿ ಸಭೆಯಲ್ಲಿ ಮಂಡಿಸಲು ನಿರ್ಣಯಿಸಲಾಗಿದೆ.<br><br>ಮುಂದುವರೆದು, ತೋಟಗಾರಿಕೆ ಇಲಾಖೆಯು ಕೆ.ಐ.ಎ.ಡಿ.ಬಿ.ಗೆ ಬರೆದ ದಿನಾಂಕ: 25.10.2017ರ ಪತ್ರದಲ್ಲಿ ಬ್ಯಾಡಗಿ ಗ್ರಾಮದ 115-34 ಎಕರೆ ಜಮೀನನ್ನು ಸ್ಪೈಸ್ ಪಾರ್ಕ್ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಲು ಭೂಮಾಲೀಕರು / ರೈತರು ತೀವ್ರ ವಿರೋಧ ವ್ಯಕ್ತಪಡಿಸುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಕೇಂದ್ರ ಸರ್ಕಾರವು ಸ್ಪೈಸ್ ಪಾರ್ಕ್ ಸ್ಥಾಪನೆಗಾಗಿ ಬ್ಯಾಡಗಿ ಗ್ರಾಮವನ್ನು ಗುರುತಿಸಿಲ್ಲವಾದ್ದರಿಂದ ಉದ್ದೇಶಿತ ಯೋಜನೆಯನ್ನು ಕೈಬಿಡಲಾಗಿದೆ ಎಂದು ತಿಳಿಸಿರುತ್ತದೆ. |

ದಿನಾಂಕ 25.10.2017ರ ಪತ್ರವನ್ನು ಅನುಬಂಧ-1 ರಲ್ಲಿ ಒದಗಿಸಿದೆ.

ದಿನಾಂಕ: 06.01.2018 ರಂದು ನಡೆದ ಮಂಡಳಿ ಸಭೆಯಲ್ಲಿ ಮೇಲಿನ ಎಲ್ಲಾ ಅಂಶಗಳ ಕುರಿತು ವಿವರವಾಗಿ ಚರ್ಚಿಸಿದ ನಂತರ ಸ್ಪೈಸ್ ಪಾರ್ಕ್ ಸ್ಥಾಪನೆಗಾಗಿ ಬ್ಯಾಡಗಿ ಗ್ರಾಮದಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿರುವ 115-34 ಎಕರೆ ಜಮೀನು ಸ್ಪೈಸ್ ಪಾರ್ಕ್ ಸ್ಥಾಪನೆಗಾಗಿ ಅಥವಾ ಇತರೆ ಯಾವುದೇ ಉದ್ದೇಶಕ್ಕಾಗಿ ಅವಶ್ಯವಿರುವ ಬಗ್ಗೆ ತೋಟಗಾರಿಕಾ ಇಲಾಖೆಯಿಂದ ಸ್ಥಿರೀಕರಣ ಪಡೆಯಲು ಅಥವಾ ಕೆ.ಐ.ಎ.ಡಿ.ಬಿ.ಯಿಂದ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸುವ ಕುರಿತು ಪರಿಶೀಲಿಸಲು ನಿರ್ಣಯಿಸಿದ್ದು, ಅಭಿಪ್ರಾಯ ಕೋರಿ ದಿನಾಂಕ 01.09.2020ರಂದು ತೋಟಗಾರಿಕೆ ಇಲಾಖೆಗೆ ಪತ್ರ ಬರೆಯಲಾಗಿದೆ.

ದಿನಾಂಕ 01.09.2020ರ ಪತ್ರವನ್ನು ಅನುಬಂಧ-2 ರಲ್ಲಿ ಒದಗಿಸಿದೆ.

ಮುಂದುವರೆದು, ಸದರಿ ಜಮೀನನ್ನು ಕೈಗಾರಿಕಾ ಪ್ರದೇಶವನ್ನಾಗಿ ಅಭಿವೃದ್ಧಿಪಡಿಸುವ ಬಗ್ಗೆ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಹಾವೇರಿ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಕಾರ್ಯಪಾಲಕ ಅಭಿಯಂತರ, ಕೆ.ಐ.ಎ.ಡಿ.ಬಿ., ದಾವಣಗೆರೆ ಇವರಿಂದ ವರದಿ ಪಡೆದ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ.

(ಡಾ॥ ಮುರುಗೇಶ ಆರ್. ನಿರಾಣಿ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಸಂಖ್ಯೆ: ಸಿಐ 124 ಐಎಪಿ(ಇ) 2022

ಕರ್ನಾಟಕ ಸರ್ಕಾರ

ಅನುಬಂಧ-I

ಸಂಖ್ಯೆ:ತೋಇ 454 ತೋಇವಿ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:25-10-2017.

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ.

ಇವರಿಗೆ:

ಮುಖ್ಯ ಕಾರ್ಯನಿರ್ವಾಹಣಾಧಿಕಾರಿ
ಹಾಗೂ ಕಾರ್ಯನಿರ್ವಾಹಕ ಸದಸ್ಯರು,
ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ,
ನಂ.49, 4 ಮತ್ತು 5 ನೆ ಮಹಡಿ, ಖನಿಜ ಭವನ,
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-01.

04/11/17
483

12301
31
29008

ಮಾನ್ಯರೆ,

ವಿಷಯ:- ಹಾವೇರಿ ಜಿಲ್ಲೆಯ ಬ್ಯಾಡಗಿ ಗ್ರಾಮದ 115-34 ಎಕರೆ ಜಮೀನಿನಲ್ಲಿ ಸ್ಪೈಸ್ ಪಾರ್ಕ್‌ನ ಸ್ಥಾಪನೆಯನ್ನು ಕೈಬಿಡುವ ಬಗ್ಗೆ.

ಉಲ್ಲೇಖ:- ಸಂ;ಕಕೈಪ್ರಮಂ/ಕೇಂ.ಕ/ಭು/ಸ್ವಾದಾ/1944/8557/2017-8.ದಿ;30-08-17.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಹಾವೇರಿ ಜಿಲ್ಲೆಯ ಬ್ಯಾಡಗಿ ಗ್ರಾಮದಲ್ಲಿ 115-34 ಎಕರೆ ಜಮೀನನ್ನು, ಸ್ಪೈಸ್ ಪಾರ್ಕ್‌ನ ಸ್ಥಾಪನೆಗಾಗಿ, ಭೂಸ್ವಾಧೀನ ಮಾಡಿಕೊಳ್ಳಲು, ಭೂಮಾಲೀಕರು/ರೈತರು ತೀವ್ರ ವಿರೋಧ ವ್ಯಕ್ತಪಡಿಸುತ್ತಿರುವ ಹಿನ್ನಲೆಯಲ್ಲಿ, ಹಾಗೂ ಕೇಂದ್ರ ಸರ್ಕಾರವು ಸ್ಪೈಸ್ ಪಾರ್ಕ್‌ನ ಸ್ಥಾಪನೆಗಾಗಿ ಬ್ಯಾಡಗಿ ಗ್ರಾಮವನ್ನು ಗುರುತಿಸಿಲ್ಲವಾದ್ದರಿಂದ ಉದ್ದೇಶಿತ ಯೋಜನೆಯನ್ನು ಕೈ ಬಿಡಲಾಗಿದೆ ಎಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

R Mahadeva 25/10/17
(ಆರ್.ಮಹಾದೇವ)
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ.

ಪ್ರತಿಯನ್ನು:-
ಆಯುಕ್ತರು, ತೋಟಗಾರಿಕೆ ಆಯುಕ್ತಾಲಯ, ಲಾಲ್‌ಬಾಗ್, ಬೆಂಗಳೂರು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, 4 ಮತ್ತು 5ನೇ ಮಹಡಿ, 'ಈಸ್ಟ್ ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 001
ದೂರವಾಣಿ : 080-22265383 ಫ್ಯಾಕ್ಸ್ : 080-22267901
ವೆಬ್‌ಸೈಟ್ : www.kiadb.in ಇ-ಮೇಲ್ : ceoemkiadb@gmail.com

ಅನುಬಂಧ-II

ಸಂಖ್ಯೆ:ಕೆಐಎಡಿಬಿ/ಕೇಂಕ/ಭೂಸ್ವಾ/1944/ 4539 /2020-21

ದಿನಾಂಕ:01-09-2020

"ನೆನಪೋಲೆ"

ಉಪ ನಿರ್ದೇಶಕರು,
ತೋಟಗಾರಿಕಾ ಇಲಾಖೆ,
ಹಾವೇರಿ ಜಿಲ್ಲಾ ಪಂಚಾಯಿತಿ,
# 38, ಡಿ.ಸಿ ಕಛೇರಿ ಆವರಣ,
"ಸಿ" ಬ್ಲಾಕ್, ಹಾವೇರಿ.

ಮಾನ್ಯರೆ,

ವಿಷಯಃ ಕೆಐಎಡಿಬಿ ವತಿಯಿಂದ ಸ್ಪೈಸ್ ಪಾರ್ಕ್ ಸ್ಥಾಪನೆಗಾಗಿ ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕು, ಬ್ಯಾಡಗಿ ಗ್ರಾಮದಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿರುವ 115ಎ-34ಗು ಭೂಸ್ವಾಧೀನದ ಬಗ್ಗೆ.

ಉಲ್ಲೇಖಃ
1. ಕೆಐಎಡಿ ಕಾಯ್ದೆ ಕಲಂ 28(4) ರ ಅಂತಿಮ ಅಧಿಸೂಚನೆ ಸಂಖ್ಯೆ: ಸಿಐ 421 ಎಸ್‌ಪಿಕ್ಯೂ 2009 ದಿನಾಂಕ:07-11-2009 ಮತ್ತು 05-08-2010.
2. 325ನೇ ಮಂಡಳಿ ಸಭೆಯ ನಿರ್ಣಯ ದಿ:06-01-2018.
3. ಈ ಕಛೇರಿಯ ಸಮಸಂಖ್ಯೆ ಪತ್ರ ದಿನಾಂಕ:21-02-2018.

$$$$$

ವಿಷಯಕ್ಕೆ ಸಂಬಂಧಿಸಿದಂತೆ, ಕೆಐಎಡಿಬಿ ವತಿಯಿಂದ ಸ್ಪೈಸ್ ಪಾರ್ಕ್ ಸ್ಥಾಪನೆಗಾಗಿ ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕು, ಬ್ಯಾಡಗಿ ಗ್ರಾಮದಲ್ಲಿ ಒಟ್ಟು 115ಎ-34ಗು ಜಮೀನನ್ನು ಸ್ವಾಧೀನಪಡಿಸಲು ಉಲ್ಲೇಖ(1)ರನ್ವಯ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.

ಸದರಿ ಪ್ರದೇಶದಲ್ಲಿ ಸ್ಪೈಸ್ ಪಾರ್ಕ್ ಸ್ಥಾಪಿಸುವ ಸಂಬಂಧ ಕೇಂದ್ರ ಸರ್ಕಾರವು ಹಾವೇರಿ ಜಿಲ್ಲೆ, ಬ್ಯಾಡಗಿ ಗ್ರಾಮವನ್ನು ಗುರುತಿಸಿಲ್ಲವಾದ್ದರಿಂದ, ಸದರಿ ಜಮೀನಿನ ಅವಶ್ಯಕತೆ ಇಲ್ಲದಿರುವುದೆಂದು ತೋಟಗಾರಿಕಾ ಇಲಾಖೆಯು ದಿನಾಂಕ:25-10-2017 ರಂದು ಈ ಕಛೇರಿಗೆ ವರದಿ ಮಾಡಿದೆ.

ಸದರಿ ವರದಿಯ ಹಿನ್ನೆಲೆಯಲ್ಲಿ ಮೇಲ್ಕಂಡ ಜಮೀನನ್ನು ಸ್ವಾಧೀನ ಕ್ರಮದಿಂದ ಕೈಬಿಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ದಿನಾಂಕ:06-01-2018 ರಂದು ಜರುಗಿದ ಮಂಡಳಿ ಸಭೆಯಲ್ಲಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ವಿವರವಾಗಿ ಚರ್ಚಿಸಿದ ನಂತರ ಸ್ಪೈಸ್ ಪಾರ್ಕ್ ಸ್ಥಾಪನೆಗಾಗಿ ಹಾವೇರಿ ಜಿಲ್ಲೆ, ಬ್ಯಾಡಗಿ ಗ್ರಾಮದಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿರುವ ಒಟ್ಟು 115ಎ-34ಗು ಜಮೀನನ್ನು ಸ್ಪೈಸ್ ಪಾರ್ಕ್ ಸ್ಥಾಪನೆಗಾಗಿ ಅಥವಾ ಇಲಾಖೆಯ ಇತರೆ ಯಾವುದೇ ಉದ್ದೇಶಕ್ಕಾಗಿ ಅವಶ್ಯವಿರುವ ಕುರಿತು ತೋಟಗಾರಿಕಾ ಇಲಾಖೆಯಿಂದ ಸ್ಥಿರೀಕರಣ ಪಡೆಯಲು ಅಥವಾ ಮಂಡಳಿಯಿಂದ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸುವ ಕುರಿತು ಪರಿಶೀಲಿಸಲು ನಿರ್ಣಯಿಸಲಾಗಿದೆ. (ಮಂಡಳಿಯ ನಿರ್ಣಯ ಪ್ರತಿಯನ್ನು ಲಗತ್ತಿಸಿದೆ).

2..

ಸದರಿ ಸಭೆಯ ನಿರ್ಣಯದಂತೆ ಫ್ಲೋಲ್ಕಂಡ ಗ್ರಾಮದಲ್ಲಿನ ಒಟ್ಟು 115ಎ-34ಗು ಜಮೀನನ್ನು ಸ್ಪೈಸ್ ಪಾರ್ಕ್ ಸ್ಥಾಪನೆಗಾಗಿ ಅಥವಾ ಇಲಾಖೆಯ ಇತರೆ ಯಾವುದೇ ಉದ್ದೇಶಕ್ಕಾಗಿ ಅವಶ್ಯವಿರುವ ಬಗ್ಗೆ ಪರಿಶೀಲಿಸಿ ಅಭಿಪ್ರಾಯ / ವರದಿ ನೀಡುವಂತೆ ಉಲ್ಲೇಖ(3) ರನ್ವಯ ಕೋರಲಾಗಿತ್ತು. ಸದರಿ ವರದಿಯು ಇದುವರೆವಿಗೂ ನಿಮ್ಮಿಂದ ಸ್ವೀಕೃತವಾಗಿರುವುದಿಲ್ಲ. ಆದಕಾರಣ ಈ ಬಗ್ಗೆ ಕೂಡಲೇ ಪರಿಶೀಲಿಸಿ ಅಭಿಪ್ರಾಯ / ವರದಿ ನೀಡುವಂತೆ ಮತ್ತೊಮ್ಮೆ ಕೋರಿದೆ.

ತಮ್ಮ ವಿಶ್ವಾಸಿ,
ಸಹಿ/-
ವಿಶೇಷ ಜಿಲ್ಲಾಧಿಕಾರಿ

<u>ಪ್ರತಿಯನ್ನು:</u>

1. ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಹಾವೇರಿ ಇವರ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
2. ವಿಶೇಷ ಭೂಸ್ವಾಧೀನಾಧಿಕಾರಿ ಕೆಐಎಡಿಬಿ, ದಾವಣಗೆರೆ. ಇವರ ಮಾಹಿತಿಗಾಗಿ ಕಳುಹಿಸುತ್ತಾ ಪ್ರಸ್ತಾವಿತ ಜಮೀನನ್ನು ಮಂಡಳಿಯ ಕೈಗಾರಿಕಾ ಪ್ರದೇಶಕ್ಕಾಗಿ ಅಭಿವೃದ್ಧಿಪಡಿಸುವ ಬಗ್ಗೆ ಜಂಟಿ ನಿರ್ದೇಶಕರು ಮತ್ತು ಕಾರ್ಯಪಾಲಕ ಅಭಿಯಂತರರ ಸಹಯೋಗದೊಂದಿಗೆ ಜಂಟಿ ಸ್ಥಳ ತಸಿಖೆ ಕೈಗೊಂಡು ಕೂಡಲೇ ವರದಿ ಸಲ್ಲಿಸುವಂತೆ ತಿಳಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ ಧಾರವಾಡ. ಇವರ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

ವಿಶೇಷ ಜಿಲ್ಲಾಧಿಕಾರಿ